ನಗುತ್ತ ಇಬ್ಬರೂ ಒಬ್ಬರೊಳಗೊಬ್ಬರು ಸೇರಿಕೊಂಡರು. "ಒಂದು ಕೆಲಸ ಮಾಡುವ. ಮಹಿಳಾ ಸಂಘಕ್ಕೆ ಹೋಗಿ ಬರುವ. ಏನಾದರೂ ಆದರೆ ಅವರಿಂದಲೇ" ದಾರಿಗಳೆಲ್ಲ ಮುಚ್ಚಿದ ನಂತರವಷ್ಟೇ ಬಾಗಿಲು ಕಾಣಿಸಿದ ಹಾಗೆ ಅರುಂಧತಿಗೆ ಹೊಸ ಹೊಸ ಆಯಾಮಗಳು ಗೋಚರಿಸತೊಡಗಿದ್ದವು... "ನೀವು ಹೆಂಗೆ ಹೇಳ್ತೀರೋ ಹಂಗೆ. ಆ ಬೋಳಿಮಗನನ್ನು ಮಾತ್ರ ಸುಮ್ನೆ ಬಿಡಲ್ಲ" ಮಧುವಂತಿಗೆ ಲವಲವಿಕೆ ಉಕ್ಕಿತು. "ಮತ್ತೆ ಹೆಂಗಸಿಗೆ ಬೈದಿ ನೀನು" ಅರುಂಧತಿ ಹುಬ್ಬು ಕೊಂಕಿಸಿ ಕೆಣಕಿದಳು. "ಬಡ್ಡಿ ಮಗ... ಈಗ ಸರಿಯಾಯ್ತಾ?" ಮಧುವಂತಿ ಬೈಗುಳ ಬದಲಿಸಿದಳು.

"ಅಲ್ಲಾ ಅರುಂಧತಿ ಮೇಡಂ, ನೀವು ಮಣಿವೇಲು ಸರ್ ಹೆಂಡತಿ ಅಂತೀರಿ, ಅಂತಹವರು ಇಂತಹವರ ಜೊತೆ? ಇರಲಿ ಬಿಡಿ, ಈಗ ನೀವು ಹೇಳೋದು ಸರಿ ಅಂತಲೇ ಅಂದುಕೊಂಡ್ರು ನನಗ್ಯಾಕೋ ಆ ಹುಡುಗಿನೇ ಸರಿ ಇದ್ದ ಹಾಗೆ ಕಾಣಲ್ಲ. ಹನುಮಕ್ಕನ ಮಗಳೂ ಅಂತೀರಿ. ಅವಳೋ, ಅವಳ ಡ್ರೆಸ್ಸೋ... ಹೆಣ್ಣು ಮಕ್ಕಳು ಹೇಗಿರಬೇಕೋ ಹಾಗಿದ್ದರೆ ಸರಿ ನೋಡಿ. ಇಲ್ಲದಿದ್ದರೆ ಹೀಗೆ ಎಡವಟ್ಟಾಗತ್ತೆ. ಅಲ್ಲ ಅವಳ್ಯಾಕೆ ಅವನ ಜೊತೆ ಹೋಗಿದ್ದು ಅಂತ ನಾವು ಯೋಚಿಸಬೇಕು ಅಲ್ವಾ? ಒಳ್ಳೆ ಮನೆತನದವರು ಯಾರಾದರೂ ಹೀಗೆ ರಾತ್ರಿ ಹೋಗ್ತಾರಾ ನೀವೇ ಹೇಳಿ? ನನ್ನ ಕೇಳಿದ್ರೆ ಇದರ ಬಗ್ಗೆ ನೀವು ತಲೆ ಕೆಡಿಸಕೊಳ್ಳದೇ ಇರೋದೇ ಒಳ್ಳೆಯದು ಅನ್ಸತ್ತೆ. ಯಾವುದಾದ್ರೂ ಜೆನ್ಯೈನ್ ಕೇಸಿದ್ರೆ ನಾವು ಏನಾದ್ರೂ ಮಾಡಬಹುದು. ಇಂತಹವು ಯಾವತ್ತಿದ್ರೂ ಹೀಗೆ. ದುಡ್ಡಿಗೋಸ್ಕರ ನಾಟಕ ಮಾಡ್ತಾವೆ ನಮ್ ಹತ್ರ ದಿನಕ್ಕೊಂದಾದರೂ ಇಂತಹ ಕೇಸ್ ಬರ್ತಾ ಇರ್ತಾವೆ." ಮಹಿಳಾ ಸಂಘದ ಅಧ್ಯಕ್ಷೆಯ ಮಾತು ಕೇಳುತ್ತ ಕೇಳುತ್ತ ಅರುಂಧತಿಗೆ ರೋಸಿ ಹೋಯಿತು. "ಥತ್ ಹೆಂಗಸರ ಜನ್ಮವೇ. ಯಾವುದಕ್ಕೂ ತನ್ನದೇ ಆದ ವ್ಯಾಖ್ಯಾನವಿಲ್ಲ, ನಿರ್ಧಾರವಿಲ್ಲ... ಇಂತದ್ದಕ್ಕೆ ಸಂಘಟನೆ ಬೇರೆ, ಹೋಗಿ ಮನೆಯಲ್ಲಿ ಗಂಡನ ಬೆನ್ನು ತಿಕ್ಕು..." ಎಂದು ಬೈಯ್ಯಬೇಕೆಂದುಕೊಂಡಳು. ಆದರೆ ಈಕೆ ಮಣಿವೇಲುವಿನ ಪರಿಚಯ ಎಂದು ನೆನಪಾಗಿ ತನ್ನ ಮೇಲೆ ತನಗೇ ಜಿಗುಪ್ಸೆ ಹತ್ತಿ ಹೊರಬಂದಳು. ಹೊರಗೆ ಬರುವಷ್ಟರಲ್ಲಿ ಮಧುವಂತಿ ಹೋಗಿಯಾಗಿತ್ತು. "ಛೇ, ಕೇಳಿಸಿಕೊಂಡಳೋ ಏನೋ" ಅನ್ನಿಸಿತು. ಏನೂ ಆಗಿಯೇ ಇಲ್ಲ ಎನ್ನುವಂತೆ ಅಲ್ಲಿಯೇ ಹಿಂದೆ ಬಂದು ನಿಂತಿದ್ದ ಅಧ್ಯಕ್ಷೆಯ ಕಪಾಳಕ್ಕೊಂದು ಬಿಗಿದು, "ಅತ್ಯಾಚಾರ ಮಾಡಿಸಿಕೊಳ್ಳೋದಕ್ಕೂ ಅಂತಸ್ತು ಬೇಕಾ?" ಕೇಳಬೇಕೆನ್ನಿಸಿತು. ಯೋಗ್ಯತೆ ಇಲ್ಲದವರಿಗೆ ಹೊಡೆಯುವುದು ಕೂಡ ಹಾಸ್ಯಾಸ್ಪದ ಅನ್ನಿಸಿ ಸುಮ್ಮನೆ ಬಂದಳು.

ಮಣಿ ರಾತ್ರಿ ನಶೆ ಏರಿಯೇ ಬಂದಿದ್ದ; ಇನ್ನಿಲ್ಲದಂತೆ ರೇಗಿದ. ಕನ್ನಡದಲ್ಲಿ ಹೆಂಗಸಿಗೆ ಅವಮಾನಿಸಲು ಸಾಧ್ಯ ಇರುವ ಎಲ್ಲ ಬೈಗುಳಗಳು ಅವನ ಬಾಯಿಂದ ಉದುರಿದವು. "ಅಲ್ಲ, ತಂದು ಹಾಕಿದ್ದು ತಿಂದುಕೊಂಡು ಇರೋದಕ್ಕೆ ಏನು? ಸಮಾಜ ಉದ್ಧಾರ ಮಾಡೋಕೆ ಹೋಗ್ತಾಳೆ... ಅವಳ್ಯಾವಳೋ ಅದ್ಯಾವನದೊ ಹಿಂದೆ ಹೋಗಿ ತೀಟೆ ತೀರಿಸಿಕೊಂಡು ಬಂದಿದ್ದಕ್ಕೆ ಇವ್ಳು ಗೆಜ್ಜೆ ಕಟ್ಕೊಂಡು ತಿರುಗೋಕೆ ಕಲ್ತಿದ್ದಾಳೆ" ಗಲೀಜು ಪದಗಳನ್ನೆಲ್ಲ ಹೊರಹಾಕಿದ. ಅರುಂಧತಿ ನಿಂತಲ್ಲಿಯೇ ವಾಕರಿಸಿದಳು. ಅವನಿಗೆ ಎದುರು ವಾದಿಸುವ ಧೈರ್ಯ ಸಾಲದೆ ತನ್ನನ್ನು ತಾನೇ ಬೈದುಕೊಂಡಳು. "ನೋಡು, ಈ ಕೇಸು ಎಲ್ಲಿಂದ ಎಲ್ಲಿಗೆ ಹೋದರೂ ಸ್ಟಾಂಡ್ ಆಗಲ್ಲ. ಆ ಹುಡುಗನ ಕಡೆಯವರು ತುಂಬಾ ಸ್ಟ್ರಾಂಗ್ ಇದಾರೆ. ಅಲ್ಲದೆ ಆವತ್ತು ರಾತ್ರಿ ಅವನ ಬೈಕಿನಲ್ಲಿ ಅವಳಾಗಿಯೇ ಹೋಗಿದ್ದಕ್ಕೆ ಸಾಕ್ಷಿ ಇದೆ. ಅವ್ಳಿಗೆ ಮುಚ್ಕೊಂಡು ಇದ್ದು ಬೇರೆ ಮದುವೆ ಆಗೋದಕ್ಕೆ ಹೇಳು. ನೀನು ಹೀಗೆ ಅವಳನ್ನ ಕಟ್ಟಿಕೊಂಡು ಕುಣಿದ್ರೆ ಮನೆಯಿಂದ ಆಚೆ ಹಾಕ್ತೀನಿ'' ಬೆರಳು ತೋರಿಸಿ ಕಣ್ಣು ಕಿರಿದಾಗಿಸಿ ನುಡಿದ. "ಅಂದ್ರೆ ನಿಮಗೆ ಏನೂ ಅನ್ನಿಸಲ್ವ? ನಮಗೇ ಒಬ್ಳು ಮಗಳಿದ್ದರೆ..." ಮಾತು ಅರುಂಧತಿಯ ಅರಿವಿಗೆ ಮೀರಿ ಬಂದಿತ್ತು. ಅವನು ಅವಾಕ್ಕಾದ. ಕಳೆದ ಇಪ್ಪತ್ತೈದು ವರ್ಷದಿಂದ ತನ್ನೆದುರು ನಿಂತು ಮಾತಾಡದೇ ಈಗ ಏಕಾಏಕಿ ನಿಂತು